

بِسْمِ اللّٰہِ الرَّحْمٰنِ الرَّحِیْمِ

# ಪ್ರಾರ್ಥನೆಯ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 26-01-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಪ್ರಾರ್ಥನೆಯ ತತ್ವಜ್ಞಾನವನ್ನು ವಿವರಿಸುತ್ತಾ ಹೀಗೆ ಹೇಳಿದರು: ಒಂದು ಶಿಶು ಹಸಿವೆಯಿಂದ ಬಳಲಿ ಮೊಲೆ ಹಾಲಿಗೋಸ್ಕರ ರೋದಿಸುತ್ತಾ ಚೀರಾಟ ಮಾಡುವಾಗ ತಾಯಿಯ ಮೊಲೆಯಿಂದ ಹಾಲು ಉಕ್ಕಿ ಬರುತ್ತದೆ. ಶಿಶುವಿಗೆ ಪ್ರಾರ್ಥನೆ ಎಂದರೆ ಏನೆಂದೇ ತಿಳಿದಿರುವುದಿಲ್ಲ. ಆದರೂ ಶಿಶುವಿನ ಚೀರಾಟ ಹಾಲನ್ನು ಉಕ್ಕಿಬರಿಸುತ್ತದೆ. ಕೆಲವು ಸಾರಿ ಕಾಣುವುದೇನೆಂದರೆ ಮೊಲೆಯಲ್ಲಿ ಹಾಲು ಇರುವುದಾಗಿ ತಾಯಿಗೆ ಭಾಸವಾಗುವುದಿಲ್ಲ. ಆದರೆ ಮಗುವಿನ ಅಳಲು ಹಾಲನ್ನು ಎಳೆದು ತರುತ್ತದೆ. ಹಾಗಿರುವಾಗ ಏನು, ನಾವು ಅಲ್ಲಾಹನ ಸನ್ನಿಧಿಯಲ್ಲಿ ಅತ್ತು ಆಕ್ರಂದನ ಮಾಡಿದರೆ ಅದು ಏನನ್ನೂ ಎಳೆದುಕೊಂಡು ಬರಲಾರದೆ? ಬರುತ್ತದೆ. ಎಲ್ಲವೂ ಬರುತ್ತದೆ. ಆದರೆ ಪಂಡಿತರೆಂದೂ ತತ್ವಜ್ಞಾನಿಗಳೆಂದೂ ತಮ್ಮನ್ನು ಹೇಳಿಕೊಳ್ಳುತ್ತಿರುವ ಅಂಧರಿಗೆ ಅವುಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಶಿಶುವಿಗೆ ತನ್ನ ತಾಯಿಯೊಂದಿಗಿರುವ ಸಂಬಂಧವನ್ನು ಮನುಷ್ಯನು ತನ್ನ ಮನಸ್ಸಿನಲ್ಲಿರಿಸಿ ಪ್ರಾರ್ಥನೆಯ ತತ್ವಜ್ಞಾನದ ಬಗ್ಗೆ ಚಿಂತಿಸುವುದಾದರೆ ಅದು ಬಹಳ ಸುಲಭವೆಂದು ತಿಳಿಯುತ್ತದೆ.

ಅಹ್ಮದಿಯರಾದ ನಮ್ಮ ಮೇಲೆ ಅಲ್ಲಾಹನ ಅತಿದೊಡ್ಡ ಅನುಗ್ರಹವೇನೆಂದರೆ, ನಮ್ಮ ಬಹುತೇಕ ಹಿರಿಯರು ಮತ್ತು ಕಿರಿಯರು ತಿಳಿದುಕೊಂಡಿದ್ದಾರೆ, ನಿಸ್ಸಹಾಯಕ ಸ್ಥಿತಿಯಲ್ಲಿ ಅತ್ತು ಗೋಳಾಡುತ್ತಾ ವಿನಯದಿಂದ ಅಲ್ಲಾಹನ ಮುಂದೆ ಬಾಗಿ ಬೇಡಿಕೊಂಡರೆ ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸುತ್ತಾನೆ ಎಂದು. ಕೆಲವು ಸಾರಿ ಪ್ರಾರ್ಥನೆಗಳು ಅಂಗೀಕರಿಸುವ ಎಂತಹ ಘಟನೆಗಳು ಸಂಭವಿಸುತ್ತವೆ ಎಂದರೆ ಅವು ಅನ್ಯರಿಗೆ ಸಹ ಆಶ್ಚರ್ಯಕರವಾಗಿರುತ್ತವೆ. ಇಂತಹ ಘಟನೆಗಳಿಗೆ ಸಂಬಂಧಿಸಿ ವಿವಿಧ ವರದಿಗಳು ಬರುತ್ತಿವೆ. ಅವುಗಳಲ್ಲಿ ಕೆಲವನ್ನು ಈಗ ನಿಮ್ಮ ಮುಂದೆ ಇರಿಸುವೆನು.

ಖಾದಿಯಾನಿನ ನಾಝಿರ್ ದಅ್‌ವತೆ ಇಲಲ್ಲಾಹ್ ಬರೆಯುತ್ತಾರೆ, ಹೋಶಿಯಾರ್‌ಪುರ್ ಜಿಲ್ಲೆಯ ಅಮೀರ್ ಹೀಗೆ ತಿಳಿಸಿದರು. ಕೆಲವು ವರ್ಷಗಳ ಹಿಂದೆ ಖೇಡಾ ಉಚ್ಚರ್‌ವಾಲ್ ಎಂಬ ಗ್ರಾಮದಲ್ಲಿ ಮಳೆಯಾಗದ ಕಾರಣ ಗ್ರಾಮದ ಜನರು ಬಹಳ ಆತಂಕದಿಂದಿದ್ದರು. ಊರಿನ ಬಾವಿಗಳಲ್ಲಿರುವ ನೀರು ತಳಮಟ್ಟಕ್ಕೆ ತಲಪಿತ್ತು. ಆ ಗ್ರಾಮದ ಬಹುಸಂಖ್ಯಾತರಾದ ಹಿಂದುಗಳು ನಮ್ಮ ಮುಅಲ್ಲಿಮರೊಂದಿಗೆ ಮಳೆಗೋಸ್ಕರ ಪ್ರಾರ್ಥಿಸಲು ಹೇಳಿದರು. ಪಂಜಾಬಿನಲ್ಲಿ ಮುಅಲ್ಲಿಮರನ್ನು ಮಿಯಾಂಜಿ ಎಂದು ಸಂಬೋಧಿಸುತ್ತಾರೆ. ಅಹ್ಮದಿ ಮುಅಲ್ಲಿಮರೊಂದಿಗೆ ಪ್ರಾರ್ಥನೆ ಮಾಡಲು ವಿನಂತಿಸಿದರೆ ನಿಶ್ಚಯವಾಗಿಯೂ ಮಳೆ ಬರುವುದೆಂದು ಅವರಿಗೆ ದೃಢ ನಂಬಿಕೆ ಇತ್ತು. ನಮ್ಮ ಮುಅಲ್ಲಿಮ್ ಅಲ್ಲಿನ ಜನರಿಗೆ ಮೊದಲು ಇಸ್ಲಾಮೀ ಪ್ರಾರ್ಥನೆಗಳಿಗೆ ಸಂಬಂಧಿಸಿದ ಶಿಷ್ಟಾಚಾರ ವಿವರಿಸಿದರು. ಅನಂತರ ಅಲ್ಲಾಹನ ಗುಣವಿಶೇಷಗಳನ್ನು ವಿಶದೀಕರಿಸಿದರು. ಮತ್ತು ಪ್ರಾರ್ಥನೆ ಮಾಡಿಸಿದರು. ಅಲ್ಲಾಹನು ಅಹ್ಮದಿಯಾ ಜಮಾಅತಿನ ಈ ಮುಅಲ್ಲಿಮರ ಪ್ರಾರ್ಥನೆ ಅಂಗೀಕರಿಸಿದನು. ಎರಡು ಮೂರು ಗಂಟೆಗಳೊಳಗೆ ಧಾರಾಕಾರ ಮಳೆ ಸುರಿಸಿದನು ಮತ್ತು ತಾನು ಸಮೀಉದ್ದುಆ (ಪ್ರಾರ್ಥನೆ ಆಲಿಸುವವನು) ಎಂದು ಸಾಬೀತುಗೊಳಿಸಿ ತೋರಿಸಿದನು. ಈ ಘಟನೆ ಆ ಗ್ರಾಮವಾಸಿಗಳ ಮೇಲೆ ಒಳ್ಳೆಯ ಪರಿಣಾಮ ಬೀರಿತು. ಗ್ರಾಮದ ಜನರು ಬಹಿರಂಗವಾಗಿ ಹೇಳಿದರು: ಅಹ್ಮದಿಯರ ಪ್ರಾರ್ಥನೆಯ ಕಾರಣದಿಂದ ಮಳೆ ಸುರಿಯಿತು ಎಂದು.

ಕೆಲವು ಸ್ಥಳಗಳಲ್ಲಿ ಮಳೆ ಸುರಿಯುವುದು ಅಲ್ಲಾಹನ ಸಹಾಯ ಮತ್ತು ಪ್ರಾರ್ಥನೆಯ ಅಂಗೀಕಾರದ ಚಿಹ್ನೆಯಾಗಿರುತ್ತದೆ. ಹಾಗೆಯೇ ಕೆಲವು ಸ್ಥಳಗಳಲ್ಲಿ ಸುರಿಯುತ್ತಿರುವ ಮಳೆ ನಿಂತು ಬಿಡುವುದು ಸಹ ಪ್ರಾರ್ಥನೆಯ ಅಂಗೀಕಾರದ ಚಿಹ್ನೆಯಾಗಿರುತ್ತದೆ. ಮುಸ್ಲಿಮೇತರರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೂ ಸ್ವೀಕರಿಸಲಿಲ್ಲವಾದರೂ ಇಸ್ಲಾಮಿನ ದೇವನು ಪ್ರಾರ್ಥನೆಗಳನ್ನು ಅಂಗೀಕರಿಸುವ ದೇವನಾಗಿದ್ದಾನೆ ಎಂದು ಅವರು ನಿಶ್ಚಯವಾಗಿಯೂ ಒಪ್ಪಿಕೊಳ್ಳುತ್ತಾರೆ.

ಗಿನಿಬಸಾವು ದೇಶದ ಮುಅಲ್ಲಿಮ್ ಅಬ್ದುಲ್ಲಾ ಸಾಹಿಬ್ ಹೇಳುತ್ತಾರೆ: ನಾವು ಸೀನ್ ಚಾಂಗ್ ಕಾಂಗ್‌ಸಾ ಎಂಬ ಗ್ರಾಮಕ್ಕೆ ತಬ್ಲೀಗ್‌ಗೋಸ್ಕರ ಹೋದೆವು. ಅಲ್ಲಿ ಜನರನ್ನು ಜಮಾಯಿಸಿ ಅಹ್ಮದಿಯಾ ಜಮಾಅತಿನ ಸಂದೇಶವನ್ನು ನೀಡಿದೆವು. ನಾವು ಅವರಿಗೆ ತಬ್ಲೀಗ್ ಮಾಡುತ್ತಾ ಇದ್ದಾಗ ಧಾರಾಕಾರವಾಗಿ ಮಳೆ ಸುರಿಯಲು ಪ್ರಾರಂಭವಾಯಿತು. ಮಳೆಯ ಕಾರಣದಿಂದ ನನ್ನ ಭಾಷಣದ ಶಬ್ದ ಜನರಿಗೆ ಸರಿಯಾಗಿ ಕೇಳಿಸುತ್ತಾ ಇರಲಿಲ್ಲ. ಜನರು ಅಲ್ಲಿಂದ ಹೊರಟು ಹೋಗಬಹುದೆಂದು ನನಗೆ ತೋರುತ್ತಿತ್ತು. ಆಗ ನಾನು ಹೀಗೆ ಪ್ರಾರ್ಥಿಸಿದೆ: ಓ ಅಲ್ಲಾಹ್, ಮಳೆಯೂ ನಿನ್ನದೇ ಆಗಿದೆ. ನಾನು ಇಲ್ಲಿಗೆ ತಂದ ಸಂದೇಶವೂ ನಿನ್ನದೇ ಆಗಿದೆ. ಆದರೆ ಮಳೆಯ ಕಾರಣದಿಂದ ಈ ಜನರಿಗೆ ನಿನ್ನ ಸಂದೇಶ ಆಲಿಸಲಾಗುವುದಿಲ್ಲ ಮತ್ತು ಅವರು ಎದ್ದು ಹೋಗಲಿದ್ದಾರೆ ಎಂದು ಪ್ರಾರ್ಥಿಸಿದೆ. ನಾನು ಪ್ರಾರ್ಥನೆ ಮಾಡಿದ ಕೂಡಲೆ ಅಲ್ಲಾಹನು ಮಳೆಯನ್ನು ನಿಲ್ಲಿಸಿದನು. ಅಲ್ಲಿದ್ದ ಅಂದಾಜು ನೂರಐವತ್ತು ಜನರಿಗೆ ತಬ್ಲೀಗ್ ಮಾಡಲಾಯಿತು. ಅಲ್‌ಹಮ್‌ದುಲಿಲ್ಲಾಹ್ – ತಬ್ಲೀಗ್ ನಂತರ ಅಲ್ಲಿದ್ದ ಎಲ್ಲರೂ ಬೈಅತ್ ಮಾಡಿದರು. ಇಲ್ಲಿ ಪ್ರಾರ್ಥಿಸಿದಾಗ ಮಳೆ ಸುರಿಯುವಿಕೆ ನಿಂತು ಹೋದ ಕಾರಣ ಮುಅಲ್ಲಿಮ್ ಸಾಹಿಬರ

ವಿಶ್ವಾಸ ಬಲಿಷ್ಠವಾಯಿತು. ಅಲ್ಲಿದ್ದ ಜನರಿಗೆ ಸಹ ಪ್ರಾರ್ಥನೆಯನ್ನು ಆಲಿಸುವ ಅಲ್ಲಾಹನನ್ನು ತೋರಿಸಿಕೊಟ್ಟಿತು. ಕೆಲವು ಜನರು ಕೇಳುತ್ತಾರೆ: ಅಲ್ಲಾಹನು ಕಾಣಿಸುವುದು ಹೇಗೆಂದು. ಅಲ್ಲಾಹನು ಈ ರೀತಿ ತನ್ನ ಶಕ್ತಿಸಾಮರ್ಥ್ಯಗಳನ್ನು ತೋರಿಸಿ ಕಾಣಿಸುತ್ತಾನೆ. ಆ ಸ್ಥಳದಲ್ಲಿ ಮಳೆ ಸುರಿಯುವಿಕೆಯ ಕಾರಣದಿಂದ ಎದ್ದು ಹೋಗಲಿದ್ದ ಜನರು ಅಲ್ಲಾಹನ ಈ ಅನುಗ್ರಹವನ್ನು ಕಂಡು ಕುಳಿತರಲ್ಲದೆ ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮನ್ನು ಸ್ವೀಕರಿಸಿದರು.

ಈಗ ಹವಾಗುಣಕ್ಕೆ ಸಂಬಂಧಿಸಿದ ವಿಷಯವನ್ನು ಬಿಟ್ಟು ಪ್ರಾರ್ಥನೆಯ ಅಂಗೀಕಾರದ ಬೇರೆ ಕೆಲವು ಘಟನೆಗಳನ್ನು ವಿವರಿಸುವೆನು. ನಮ್ಮ ದೇವನು ಕೇವಲ ಹವಾಮಾನಗಳನ್ನು ಮಾತ್ರ ನಿಯಂತ್ರಿಸುವ ದೇವನಲ್ಲ. ಅವನು ಸರ್ವಶಕ್ತನಾಗಿದ್ದಾನೆ. ಪ್ರತಿಯೊಂದು ರೀತಿಯ ಪ್ರಾರ್ಥನೆಯನ್ನು ಆಲಿಸುವವನಾಗಿದ್ದಾನೆ. ಅವನಿಗೆ ಅಸಂಖ್ಯಾತ ಗುಣವಿಶೇಷಗಳಿವೆ. ಅವನು ತನ್ನ ಗುಣಗಳ ದೃಶ್ಯಗಳನ್ನು ತೋರಿಸುತ್ತಾ ಇರುತ್ತಾನೆ.

ಬೆನಿನ್ ದೇಶದ ಮುಅಲ್ಲಿಮ್ ಮತೀನ್ ಸಾಹಿಬ್ ಹೇಳುತ್ತಾರೆ: ಕೆಲವು ದಿನಗಳ ಹಿಂದೆ ಹೊಸದಾಗಿ ಬೈಅತ್ ಮಾಡಿದ ಒಬ್ಬರು ಬಂದು ತಾವು ನಮ್ಮ ಮನೆಗೆ ಬನ್ನಿರಿ, ನನ್ನ ಪತ್ನಿಯ ಸ್ಥಿತಿ ಬಹಳ ಕೆಟ್ಟು ಹೋಗಿದೆ ಎಂದರು. ಅವರ ಪತ್ನಿಗೆ ಗರ್ಭಕ್ಕೆ ಸಂಬಂಧಿಸಿದ ಸಮಸ್ಯೆ ಇದ್ದುದರಿಂದ ನಾನು ನನ್ನ ಪತ್ನಿಯೊಂದಿಗೆ ಅವರ ಮನೆಗೆ ಹೋದೆನು. ಗರ್ಭಿಣಿಗೆ ತೀವ್ರವಾದ ಜ್ವರವಿದ್ದ ಕಾರಣ ಗರ್ಭಕೋಶ ಸಂಕುಚಿತಗೊಂಡು ಶಿಶು ಜನನಕ್ಕೆ ಅಡ್ಡಿಯಾಗಿತ್ತು. ಆ ಅಹ್ಮದಿ ಹೇಳಿದರು: ಕಳೆದ ಎರಡು ಸಾರಿ ಹೀಗೆಯೇ ಆಗಿತ್ತು. ಶಿಶುವನ್ನು ರಕ್ಷಿಸಬಹುದು ಅಥವಾ ತಾಯಿಯನ್ನು ಮಾತ್ರ ಎಂದು ಡಾಕ್ಟರ್ ಹೇಳಿದ ಕಾರಣ ತಾಯಿಯನ್ನು ರಕ್ಷಿಸಲು ಪ್ರಯತ್ನಿಸಲಾಯಿತು. ಮತ್ತು ಶಿಶುಗಳನ್ನು ಕಳೆದುಕೊಳ್ಳಬೇಕಾಯಿತು. ಈ ಮೂರನೆಯ ಸಾರಿ ಸಹ ಇಂತಹ ಪರಿಸ್ಥಿತಿ ತಲೆದೋರಿದೆ. ಮುಅಲ್ಲಿಮ್ ಹೇಳಿದರು: ನಾವು ಇಂತಹ ಸಂದರ್ಭಗಳಲ್ಲಿ ಔಷಧಿಯೊಂದಿಗೆ ಪ್ರಾರ್ಥನೆ ಸಹ ಮಾಡುವೆವು. ಹಾಗೆ ನಾನು ಅಲ್ಲಾಹನ ಪರಿಶುದ್ಧ ನಾಮಗಳ ಮೂಲಕ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಸೀಲ ಮೂಲಕ ಪ್ರಾರ್ಥಿಸಲು ತೊಡಗಿದೆ. ಪ್ರಾರ್ಥಿಸಿದ ನಂತರ ಸೂರತುಲ್ ಫಾತಿಹ ಪಠಿಸಿ ನೀರಿಗೆ ಊದಿದೆನು ಮತ್ತು ಆ ಮಹಿಳೆಗೆ ಅದನ್ನು ಕುಡಿಯಲು ನೀಡಿದೆನು. ಎರಡು ಮೂರು ಸಾರಿ ಹೀಗೆ ಊದಿ ಮಹಿಳೆಗೆ ನೀರು ಕುಡಿಯಲು ನೀಡಲಾಯಿತು. ಮೂರನೆಯ ಸಾರಿ ನೀರು ಕುಡಿಸಿದ ನಂತರ ಪತಿ ಬಂದು ಹೇಳಿದರು, ನನ್ನ ಪತ್ನಿ ಗಂಡು ಶಿಶುವನ್ನು ಹೆತ್ತಳು ಮತ್ತು ಆಕೆಯ ಆರೋಗ್ಯ ಸಹ ಚೆನ್ನಾಗಿದೆ ಎಂದು. ಈ ಹೊಸದಾಗಿ ಬೈಅತ್ ಮಾಡಿದ ಅಹ್ಮದಿಯ ವಿಶ್ವಾಸ ವರ್ಧಿಸಿತು. ಅಲ್ಲಾಹನ ಅಸ್ತಿತ್ವದ ಬಗ್ಗೆ ಮತ್ತು ಪ್ರಾರ್ಥನೆ ಅಂಗೀಕಾರವಾಗುವ ಬಗ್ಗೆ ವಿಶ್ವಾಸ ವರ್ಧಿಸಿತು. ಅನಂತರ ಆ ಅಹ್ಮದಿ ಬಹಳ ಶ್ರದ್ಧೆಯಿಂದ ವಿನಯಾನ್ವಿತನಾಗಿ ಅಳಲಿನೊಂದಿಗೆ ಪ್ರಾರ್ಥಿಸಲು ಪ್ರಾರಂಭಿಸಿದರು.

ಕರ್ನಾಟಕದ ಒಬ್ಬ ಜಿಲ್ಲಾ ಅಮೀರ್ ಬರೆಯುತ್ತಾರೆ: ಅಲ್ಲಿನ ಒಂದು ಜಮಾಅತಿನ ಸದರ್ ಸಾಹಿಬರಿಗೆ ಬ್ರೈನ್ ಟ್ಯೂಮರ್ ಆಗಿತ್ತು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿನ ಡಾಕ್ಟರ್ ಹೇಳಿದರು ಅವರಿಗೆ
ಚಿಕಿತ್ಸೆ ನಡೆಸಲು ಸಾಧ್ಯವಾಗದು, ಶಸ್ತ್ರಕ್ರಿಯೆ ನಡೆಸುವಾಗ ಪ್ರಾಣ ಸಹ ಹೋಗಬಹುದು ಎಂದು. ಅವರು ಕೂಡಲೇ ನನಗೆ ಪ್ರಾರ್ಥಿಸಲು ಪತ್ರ ಬರೆದರು. ಅವರಿಗೆ ಅಲ್ಲಾಹನು ರೋಗೋಪಶಮನ ನೀಡಲಿ ಎಂದು ಪ್ರಾರ್ಥಿಸಿ ಉತ್ತರ ಸಹ ನೀಡಲಾಗಿತ್ತು. ಸದರ್ ಸಾಹಿಬ್ ಹೇಳುತ್ತಾರೆ: ಒಂದು ತಿಂಗಳ ನಂತರ ಡಾಕ್ಟರ್‌ಗಳು ಪರೀಕ್ಷಿಸಿದಾಗ ಅವರು ಆಶ್ಚರ್ಯಗೊಂಡರು. ಬ್ರೈನ್ ಟ್ಯೂಮರಿನ ಯಾವ ಚಿಹ್ನೆಯೂ ಬಾಕಿಯಾಗಿರಲಿಲ್ಲ. ಅಲ್ಲಾಹನ ಅನುಗ್ರಹದಿಂದ ಪ್ರಾರ್ಥನೆಯ ಫಲಸ್ವರೂಪವಾಗಿ ಹುಸೈನ್ ಸಾಹಿಬರು ರೋಗಮುಕ್ತರಾದರು.

ಗಿನಿಕನಾಕರಿ ದೇಶದ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: ಹೊಸದಾಗಿ ಬೈಅತ್ ಮಾಡಿದ ಒಬ್ಬ ನಿಷ್ಠಾವಂತ ತರುಣ ಸುಲೈಮಾನ್ ಸಾಹಿಬ್, ತಾನು ಜೀವಿತವನ್ನು ವಕ್ಫ್ ಮಾಡಿ ಜಮಾಅತಿಗೆ ಸೇವೆ ಸಲ್ಲಿಸುವುದಾಗಿ ಆಗ್ರಹ ಪ್ರಕಟಿಸಿದರು. ಅವರಿಗೆ ಸಿಯೆರ್ರಾಲಿಯೋನ್ ದೇಶದಲ್ಲಿರುವ ನಮ್ಮ ಜಾಮಿಅವನ್ನು ಪ್ರವೇಶಿಸಲು ನಾವು ಸಲಹೆ ನೀಡಿದೆವು. ಆ ತರುಣ ಸಂತೋಷಗೊಂಡು ಅದಕ್ಕೆ ಸಿದ್ಧತೆಗಳನ್ನು ಮಾಡಲು ಪ್ರಾರಂಭಿಸಿದರು. ನಾವು ಆ ತರುಣನ ತಂದೆ ತಾಯಂದಿರನ್ನು ಮಿಶನ್ ಹೌಸಿಗೆ ಕರೆಸಿದೆವು. ಅವರು ಅಹ್ಮದಿಯರಾಗಿರಲಿಲ್ಲ. ನಾವು ಅವರ ಅಂಗೀಕಾರವನ್ನು ಪಡೆಯಲು ಬಯಸಿದ್ದೆವು. ಅವರು ಬಾಹ್ಯವಾಗಿ ಸಂತೋಷ ಪ್ರಕಟಿಸಿ ಎರಡು ದಿನಗಳ ನಂತರ ಬರುವುದಾಗಿ ಹೇಳಿ ಹೊರಟುಹೋದರು. ಅವರು ಇಲ್ಲಿಂದ ಹೋದ ನಂತರ ತಮ್ಮ ಮೌಲವಿಯ ಸಲಹೆ ಪಡೆದರು. ಮೌಲವಿ ಅವರನ್ನು ಮೋಸಗೊಳಿಸಿ ನಮ್ಮ ವಿರುದ್ಧ ಪೋಲೀಸಿಗೆ ದೂರು ನೀಡುವಂತೆ ಮಾಡಿದರು. ಅಹ್ಮದಿಯಾ ಜಮಾಅತ್ ಒಂದು ಮುಸ್ಲಿಮೇತರ ಭೀಕರ ಸಂಘಟನೆ ಎಂದೂ ಹುಡುಗನನ್ನು ದಾರಿತಪ್ಪಿಸಿ ಉಗ್ರಗಾಮಿಯನ್ನಾಗಿ ಮಾಡುತ್ತದೆ ಎಂದೂ ದೂರು ನೀಡಲಾಯಿತು. ನಮಗೆ ಬಹಳ ಆತಂಕವುಂಟಾಯಿತು. ಮುಬಲ್ಲಿಗ್ ನನಗೆ ಸಹ ದುಆ ಮಾಡಲು ಬರೆದರು. ನಾನು ಉತ್ತರ ನೀಡಿದೆ. ಅಲ್ಲಾಹನು ಅನುಗ್ರಹ ನೀಡಲಿ. ನೀವು ಸಹ ಪ್ರಯತ್ನಿಸಿರಿ ಮತ್ತು ಪ್ರಾರ್ಥಿಸಿರಿ ಎಂದು ತಿಳಿಸಿದೆ. ಮುಬಲ್ಲಿಗ್ ಬರೆಯುತ್ತಾರೆ: ಪೋಲೀಸರು ತಪಾಸಣೆ ನಡೆಸುವಾಗ ಅವರಿಗೆ ಜಮಾಅತಿನ ಬಗ್ಗೆ ಪರಿಚಯ ಮಾಡಿಕೊಡಲಾಯಿತು. ನಮ್ಮ ಕರಪತ್ರ ಮೊದಲಾದುವುಗಳನ್ನು ನೀಡಲಾಯಿತು. ಹಾಗೆ ಅಲ್ಲಾಹನ ಅನುಗ್ರಹದಿಂದ ಪೋಲೀಸ್ ಕಮೀಶನರ್ ದೂರನ್ನು ತಿರಸ್ಕರಿಸಿದರಲ್ಲದೆ ಅವರು ಹೇಳಿದರು, ಇಲ್ಲಿ ವಿವರಿಸಲಾದ ಇಸ್ಲಾಮ್ ನನಗೆ ಹೆಚ್ಚು ಸರಿಯಾದುದೂ ಶಾಂತಿದಾಯಕವೂ ಆಗಿದೆ ಎಂದು ತೋರುತ್ತದೆ. ನನಗೆ ಈ ಜಮಾಅತ್ ಬಗ್ಗೆ ಹೆಚ್ಚಿನ ಮಾಹಿತಿ ನೀಡಿರಿ. ನಾನು ಸಹ ಈ ಜಮಾಅತಿನಲ್ಲಿ ಸೇರಲು ಇಚ್ಛಿಸುತ್ತೇನೆ.

ಅಲ್ಲಾಹನು ದುಆಗಳ ಅಂಗೀಕಾರದ ಮೂಲಕ ಅಹ್ಮದಿಯರ ವಿಶ್ವಾಸವನ್ನು ಹೇಗೆ ಬಲಪಡಿಸುತ್ತಾನೆ ಮತ್ತು ಖಿಲಾಫತ್ ಬಗ್ಗೆ ದೃಢವಿಶ್ವಾಸವನ್ನು ಹೊಂದುವಂತೆ ಹೇಗೆ ಮಾಡುತ್ತಾನೆ ಎಂಬುವುದಕ್ಕೆ ಸಂಬಂಧಿಸಿ ಒಂದು ಘಟನೆಯನ್ನು

ಮಾಲಿ ದೇಶದ ಇದ್ರೀಸ್ ತರಾವಡೆ ಸಾಹಿಬ್ ಹೀಗೆ ವಿವರಿಸುತ್ತಾರೆ: 2008ರಲ್ಲಿ ಖಿಲಾಫತ್ ಜುಬಿಲಿ ಜಲ್ಸದಲ್ಲಿ ಭಾಗವಹಿಸಲು ನಾನು ಘಾನಕ್ಕೆ ಹೋಗಿದ್ದೆ. ನಾನು ಕೋಳಿ ಸಾಕುವ ಉದ್ಯಮ ಮಾಡುತ್ತಿದ್ದೆ. ನಾನು ಕೋಳಿಗಳನ್ನು ಬಿಟ್ಟು ಘಾನಕ್ಕೆ ಹೋದಾಗ ನನ್ನ ಎಲ್ಲಾ ಕೋಳಿಗಳು ಸತ್ತು ಹೋದುವು. ನಾನು ಒಬ್ಬನಿಂದ ಹಣ ಪಡೆದು ಈ ವೃತ್ತಿ ಮಾಡುತ್ತಿದ್ದೆ. ನಾನು ಅಹ್ಮದಿಯಾಗಿದ್ದೇನೆಂದೂ ಅಹ್ಮದಿಯರ ಜಲ್ಸದಲ್ಲಿ ಭಾಗವಹಿಸಲು ಹೋದಾಗ ಕೋಳಿಗಳು ಸತ್ತು ಹೋದವು ಎಂದೂ ತಿಳಿದಾಗ ನನಗೆ ಹಣ ನೀಡಿದ್ದ ಆ ವ್ಯಕ್ತಿ ಬಹಳ ಸಿಟ್ಟುಗೊಂಡನು. ನಾನು ಘಾನದಿಂದ ಮರಳಿ ಬಂದಾಗ ಅವನು ನನಗೆ ಸಂದೇಶ ಕಳುಹಿಸಿದನು. ಒಂದು ವಾರದೊಳಗೆ ನನ್ನ ಒಂದು ಲಕ್ಷದ ಐವತ್ತು ಸಾವಿರ ಫ್ರಾಂಕ್ ಸೇಫ ವಾಪಾಸು ಮಾಡಬೇಕೆಂದು. ನಾನು ಬಹಳ ಗಾಬರಿಗೊಂಡೆ. ನನ್ನ ಬಳಿ ಹಣವಿರಲಿಲ್ಲ. ವಿರೋಧಿ ನನ್ನನ್ನು ಬಹಳ ಹೀನೈಸುವನು ಎಂದು ಭಾವಿಸಿ ನಾನು ರಾತ್ರಿಯಿಡೀ ಬಹಳ ಪ್ರಾರ್ಥಿಸಿದೆ. ಅಲ್ಲಾಹನು ನನಗೆ ಯಾವುದಾದರೂ ವ್ಯವಸ್ಥೆ ಮಾಡಲಿ. ನಾನು ಖಲೀಫರೊಂದಿಗೆ ನನಗಿರುವ ಪ್ರೀತಿಯ ಕಾರಣದಿಂದ ಜಲ್ಸದಲ್ಲಿ ಭಾಗವಹಿಸಲು ಹೋಗಿದ್ದೆ ಎಂದು ಪ್ರಾರ್ಥಿಸಿದೆನು. ನಾನು ಒಂದು ಸ್ವಪ್ನ ಕಂಡೆನು. ಅದರಲ್ಲಿ ಒಂದು ಟ್ರಕ್‌ನಿಂದ ಧಾನ್ಯ ನೆಲಕ್ಕೆ ಬಿದ್ದಿದೆ. ಅದನ್ನು ನಾನು ಬಾಚಿಕೊಳ್ಳುತ್ತಿದ್ದೇನೆ. ಹಾಗೆ ನಾನು ಬೆಳಗ್ಗೆ ಎದ್ದು ಆ ಸ್ಥಳಕ್ಕೆ ಹೋದಾಗ ಅಲ್ಲಿ ಯಾವುದೇ ಟ್ರಕ್ ಇರಲಿಲ್ಲ. ಆದರೆ ಅಲ್ಲಿ ಧಾನ್ಯ ನೆಲಕ್ಕೆ ಬಿದ್ದಿರುವುದು ಕಾಣಿಸಿತು. ನಾನು ಆ ಧಾನ್ಯ ಬಾಚಿಕೊಳ್ಳುತ್ತಾ ಇದ್ದಾಗ ಅಚಾನಕವಾಗಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಲಭಿಸಿತ್ತು. ಅದನ್ನು ತೆರೆದಾಗ ಅದರಲ್ಲಿ ಒಂದು ಲಕ್ಷದ ಎಂಬತ್ತು ಸಾವಿರ ಫ್ರಾಂಕ್ ಸೇಫ ಇತ್ತು. ನಾನು ಆ ಪ್ರದೇಶದ ಜನರೊಂದಿಗೆ ವಿಚಾರಿಸಿದಾಗ ಅಲ್ಲಿ ಒಂದು ಟ್ರಕ್ ರಾತ್ರಿ ನಿಂತಿತ್ತು ಎಂದೂ ಅದು ಸೆನಗಲ್ ಕಡೆಗೆ ಸಾಗಿದೆ ಎಂದೂ ತಿಳಿಯಿತು. ನಾನು ನನಗೆ ಲಭಿಸಿದ ಹಣದ ಬಗ್ಗೆ ತಿಳಿಸಿ ಅದು ಯಾರದಾದರೂ ಆಗಿದ್ದರೆ ತೆಗೆದುಕೊಂಡು ಹೋಗಬಹುದು ಎಂದು ಹೇಳಿದೆ. ಆದರೆ ಯಾರೂ ಬರಲಿಲ್ಲ. ನನಗೆ ಸಾಲ ನೀಡಿದವನು ಬಂದು ಅಸಭ್ಯತೆಯಿಂದ ವರ್ತಿಸಿದಾಗ ನಾನು ಹೇಳಿದೆ, ನೀನು ಸಹನೆದೋರು, ನಾನು ನಿನ್ನ ಸಾಲವನ್ನು ಮರುಪಾವತಿ ಮಾಡುವೆನು ಎಂದು. ಅಲ್ಲಾಹನು ನನಗೆ ಅದರ ವ್ಯವಸ್ಥೆ ಮಾಡಿಕೊಟ್ಟಿದ್ದಾನೆ ಎಂದು ಹೇಳಿದೆ. ಹಾಗೆ ನಾನು ಪಡೆದ ಸಾಲವನ್ನು ಮರುಪಾವತಿ ಮಾಡಿದೆ. ಹಲವು ವರ್ಷಗಳು ದಾಟಿ ಹೋದರೂ ನನಗೆ ದೊರಕಿದ ಹಣದ ಮಾಲೀಕತ್ವವನ್ನು ಸ್ಥಾಪಿಸಲು ಯಾರೂ ಆಗಮಿಸಲಿಲ್ಲ.

ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕಾರ ಪಡೆದ ಬಗ್ಗೆ ಕೆಲವು ಘಟನೆಗಳನ್ನು ನಾನು ವಿವರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ವಿಧಿನಿರ್ಣಯಗಳ ನಿಯಮಗಳಲ್ಲಿ ಪ್ರಾರ್ಥನೆ ಅಂಗೀಕಾರವಾದುದರ ಉದಾಹರಣೆಗಳಿವೆ. ಈ ನಿಯಮಗಳ ಪ್ರಕಾರವೇ ಅವನು ಪ್ರತಿಯೊಂದು ಕಾಲಘಟ್ಟದಲ್ಲಿ ಜೀವಂತ ಮಾದರಿಗಳನ್ನು ಕಳುಹಿಸುತ್ತಾನೆ. ಪ್ರಾರ್ಥನೆಯ ಅಂಗೀಕಾರದ ಜೀವಂತ ಉದಾಹರಣೆಗಳ ಭಾಗವಾಗಲು ಇಚ್ಛಿಸುವುದಾದರೆ ಕೆಲವು ಕಡ್ಡಾಯ ಕರ್ತವ್ಯಗಳಿವೆ. ಕೆಲವು ಶರತ್ತುಗಳು ಇವೆ. ಅವುಗಳನ್ನು ಈಡೇರಿಸುವುದು ಆವಶ್ಯಕವಾಗಿವೆ. ಪ್ರಾರ್ಥನೆಗಳ ಕಡ್ಡಾಯ ಕರ್ತವ್ಯಗಳಲ್ಲಿ ಪ್ರಥಮವಾದುದು ಸತ್ಕರ್ಮ ಮಾಡಬೇಕು ಮತ್ತು ದೃಢವಿಶ್ವಾಸ ಹೊಂದಬೇಕು ಎಂಬುದಾಗಿದೆ. ಯಾರು ತನ್ನ ನಂಬಿಕೆಗಳನ್ನು ಸರಿಪಡಿಸುವುದಿಲ್ಲವೋ ಮತ್ತು ಸತ್ಕರ್ಮಗಳನ್ನು ಮಾಡುವುದಿಲ್ಲವೋ ಅವನು ಪ್ರಾರ್ಥನೆ ಮಾಡುವುದು ಅಲ್ಲಾಹನನ್ನು ಪರೀಕ್ಷಿಸುವ ರೂಪದಲ್ಲಿ ಆಗಿದೆ. ಆದುದರಿಂದ ಸತ್ಯವಿಶ್ವಾಸವನ್ನು ನಂಬಿಕೆಗಳನ್ನು ದೃಢಪಡಿಸುವ ಮೂಲಕ ಬಲಿಷ್ಠಗೊಳಿಸಬೇಕು. ಕರ್ಮಗಳನ್ನು ಅಲ್ಲಾಹನ ಸಂಪ್ರೀತಿ ಗಳಿಸಲು ಅವನ ಆಜ್ಞೆಗಳ ಪ್ರಕಾರ ಮಾಡಬೇಕಾದುದು ಆವಶ್ಯಕವಾಗಿದೆ.

ನಾವು ಅಲ್ಲಾಹನ ಆಜ್ಞೆ ಪ್ರಕಾರ ಐದು ಹೊತ್ತಿನ ನಮಾಝ್‌ಗಳ ಬಗ್ಗೆ ಗಮನ ಹರಿಸುವುದಿಲ್ಲವಾದರೆ, ಜನರ ಹಕ್ಕುಗಳನ್ನು ಈಡೇರಿಸಿಕೊಡುವುದಿಲ್ಲವಾದರೆ, ನಾವು ಕಷ್ಟಕ್ಕೊಳಗಾದಾಗ ಅಲ್ಲಾಹನ ನೆನಪು ಬರುವುದಾದರೆ ಮತ್ತು ಆಗ ಜನರ ಹಕ್ಕುಗಳನ್ನು ಈಡೇರಿಸುವ ನೆನಪು ಬರುವುದಾದರೆ ಅದು ಸರಿಯಾಗಲಾರದು. ಆದುದರಿಂದ ನಾವು ಮೊದಲು ನಮ್ಮ ಸ್ಥಿತಿಯನ್ನು ಉತ್ತಮ ಪಡಿಸಬೇಕಾಗಿದೆ. ಕೇವಲ ನಮ್ಮ ನಂಬಿಕೆಗಳು ಸರಿಯಾಗಿದ್ದರೆ ಸಾಕಾಗಲಾರದು. ಅದರ ಜೊತೆಗೆ ಸತ್ಕರ್ಮಗಳಿಸಬೇಕು. ಸತ್ಕರ್ಮ ಎಂದರೆ ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಸಹ ಈಡೇರಿಸುವುದು. ಹೀಗೆ ಮಾಡಿದರೆ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಆಲಿಸುವನು. ಅಲ್ಲಾಹನ ಆಜ್ಞೆಗಳ ಪ್ರಕಾರ ನಮ್ಮ ಜೀವಿತವನ್ನು ಮಾರ್ಪಡಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ಆರಾಧನೆಗಳ ಮತ್ತು ದುಆಗಳ ಹಕ್ಕುಗಳನ್ನು ಈಡೇರಿಸಲು ನಮಗೆ ಅಲ್ಲಾಹನು ಭಾಗ್ಯ ನೀಡಲಿ – ಆಮೀನ್.

ನಮಾಝ್‌ಗಳ ನಂತರ ಎರಡು ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಒಂದನೆಯ ಜನಾಝ ಮುಕರ್‍ರಮ್ ಚೌಧರಿ ನಿಅ್‌ಮತುಲ್ಲಾ ಸಾಹೀ ಸಾಹಿಬರದಾಗಿದೆ. 2018 ಜನವರಿ 15ರಂದು ಕೆನಡದಲ್ಲಿ ಅವರು ನಿಧನ ಹೊಂದಿದರು – ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಹಝ್ರತ್ ಚೌಧರಿ ಝಫರುಲ್ಲಾ ಖಾನ್ ಸಾಹಿಬರ ಮಾತೆ ಹಝ್ರತ್ ಹುಸೈನ್ ಬೀಬಿ ಸಾಹಿಬರವರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತು. ಅವರು ಖಾದಿಯಾನಿಗೆ ಹೋಗಿ ಬೈಅತ್ ಮಾಡಿದ್ದರು. ಚೌಧರಿ ನಿಅ್‌ಮತುಲ್ಲಾ ಸಾಹಿಬ್‌ರಿಗೆ ಜಮಾಅತ್‌ಗೆ ಸೇವೆ ಸಲ್ಲಿಸುವ ಭಾಗ್ಯ ಲಭಿಸಿದೆ. ಅವರು ಪಾಕಿಸ್ಥಾನದ ಹೈದರಾಬಾದ್ ಜಿಲ್ಲೆಯ ಅಮೀರ್ ಆಗಿದ್ದರು. ಅವರು ಹೈದರಾಬಾದ್ ಜಿಲ್ಲೆಯ ನಾಝಿಮ್ ಅನ್ಸಾರುಲ್ಲಾಹ್ ಸಹ ಆಗಿದ್ದರು. ಹೈದರಾಬಾದಿನ ಖುದ್ದಾಮುಲ್ ಅಹ್ಮದಿಯಾದ ಖಾಯಿದ್, ಪಾಕಿಸ್ಥಾನದ ಸದರ್ ಅಂಜುಮನ್ ಅಹ್ಮದಿಯಾ ರಬ್ವದಲ್ಲಿ ನಾಝಿಮ್ ಜಾಯಿದಾದ್ ಆಗಿದ್ದರು. ಅವರು ಬಾಲ್ಯದಿಂದಲೇ ತಹಜ್ಜುದ್ ನಮಾಝ್ ಅನುಷ್ಠಿಸುತ್ತಿದ್ದರು. ಅವರ ಕೊನೆಯುಸಿರು ತನಕ ಅದನ್ನು ಮುಂದುವರಿಸಿದರು. ಅವರು ಬಾಜಮಾಅತ್ ನಮಾಝ್

ಕ್ರಮಬದ್ಧವಾಗಿ ನಿರ್ವಹಿಸುತ್ತಿದ್ದರು. ಅವರಿಗೆ ದುಆದ ಬಗ್ಗೆ ಅಸಾಧಾರಣ ದೃಢನಂಬಿಕೆ ಇತ್ತು. ಅವರಿಗೆ ಖಿಲಾಫತ್ ಬಗ್ಗೆ ಅತ್ಯಂತ ಹೆಚ್ಚು ಆದರಭಾವವಿತ್ತು. ಅವರು ಜಲ್ಸ ಸಾಲಾನದಲ್ಲಿ ಭಾಗವಹಿಸುವ ಬಗ್ಗೆ ಪ್ರಾಮುಖ್ಯತೆ ನೀಡುತ್ತಿದ್ದರು. ಬಹಳ ಸಹನೆ ದೋರುವವರೂ ಬಹಳ ಕೃತಜ್ಞತೆ ಅರ್ಪಿಸುವವರೂ ಆಗಿದ್ದರು. ಅವರು ಅನ್ಯರ ಕಷ್ಟದ ಬಗ್ಗೆ ಬಹಳ ಹೆಚ್ಚು ಗಮನ ಹರಿಸುವವರಾಗಿದ್ದರು. ಅವರು ಆತ್ಮನಿಯಂತ್ರಣವುಳ್ಳವರೂ ಬಹಳ ಮೃದು ಸ್ವಭಾವಿಯೂ ಆಗಿದ್ದರು. ಅವರು ಸಾಮಾನ್ಯ ರೋಗ ಅಥವಾ ಕಷ್ಟದ ಬಗ್ಗೆ ಎಂದೂ ಪ್ರಸ್ತಾಪಿಸುತ್ತಿರಲಿಲ್ಲ. ಅವರಿಗೆ ಉದ್ಯೋಗಿಯಾಗಿದ್ದಾಗ ಬಹಳ ಉತ್ತಮ ಸಂಬಳ ಲಭಿಸುತ್ತಿತ್ತು. ಆದರೆ ಅವರು ತನ್ನ ಸ್ವಂತಕ್ಕೋಸ್ಕರ ಹೆಚ್ಚು ಖರ್ಚು ಮಾಡುತ್ತಿರಲಿಲ್ಲ. ಟೆಕ್‌ಸ್ಟೈಲ್ ಇಂಡಸ್ಟ್ರೀಯಲ್ಲಿ ಅವರಿಗೆ ಬಹಳ ಪ್ರಸಿದ್ಧಿ ಇತ್ತು. ಆಯಾಕಾಲದ ಖಲೀಫರಿಗೆ ಪತ್ರ ಬರೆಯಲು ತನ್ನ ಮಕ್ಕಳಿಗೆ ಉಪದೇಶಿಸುತ್ತಿದ್ದರು. ಅವರು ಮೂವರು ಪುತ್ರಿಯರನ್ನೂ ಇಬ್ಬರು ಪುತ್ರರನ್ನೂ ಅಗಲಿ ಹೋಗಿರುವರು. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೆ ಸಹ ಅವರ ಸತ್ಕರ್ಮಗಳನ್ನು ಜಾರಿಯಲ್ಲಿರಿಸುವ ಭಾಗ್ಯ ನೀಡಲಿ.

ಎರಡನೆಯ ಜನಾಝ ಝಫರುಲ್ಲಾ ಖಾನ್ ಬಟರ್ ಸಾಹಿಬರದಾಗಿದೆ. ಅವರು ಶೇಖ್‌ಪುರ ಜಿಲ್ಲೆಯ ಕರ್‌ತೂ ನಿವಾಸಿ. ಅವರು 2018 ಜನವರಿ 9ರಂದು ನಿಧನ ಹೊಂದಿದರು – ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. ಅವರು ಜನ್ಮತಃ ಅಹ್ಮದಿಯಾಗಿದ್ದರು. ಅವರ ಪಿತ ಚೌಧರಿ ಅಲ್ಲಾದತ್ತ ಸಾಹಿಬ್ 1928ರಲ್ಲಿ ಅಹ್ಮದಿಯಾಗಿದ್ದರು. ಶೇಖ್‌ಪುರ ಜಿಲ್ಲೆಯ ಕರ್‌ತೂ ಗ್ರಾಮದಲ್ಲಿ ಅಲ್ಲಿನ ಸದರ್ ಆಗಿ ಜಮಾಅತ್‌ಗೆ ಸೇವೆ ಸಲ್ಲಿಸುತ್ತಿದ್ದರು. ತಹಜ್ಜುದ್ ನಮಾಝ್, ಐದು ಹೊತ್ತಿನ ನಮಾಝ್ ಕ್ರಮಬದ್ಧವಾಗಿ ಅನುಷ್ಠಿಸುವವರಾಗಿದ್ದರು. ಖುತ್‌ಬಗಳನ್ನು ಆಲಿಸುವವರೂ ಕ್ರಮಬದ್ಧವಾಗಿ ಚಂದ ಕೊಡುವವರೂ ಆಗಿದ್ದರು. ಅವರು ಸರಳ ಪ್ರಕೃತಿ ಹೊಂದಿದ್ದರು. ಅವರು ಮೂವರು ಪುತ್ರರನ್ನೂ ಮೂವರು ಪುತ್ರಿಯರನ್ನೂ ಅಗಲಿ ಹೋಗಿರುವರು. ಅವರ ಒಳಿತುಗಳನ್ನು ಅವರ ಮಕ್ಕಳು ಜಾರಿಯಲ್ಲಿರಿಸುವವರಾಗಲಿ. ಅವರು ಯಾವ ಭಾವನೆಯಿಂದ ತನ್ನ ಪುತ್ರನನ್ನು ವಕ್‌ಫ್ ಮಾಡಿದ್ದರೋ ಆ ಪುತ್ರ ಸಹ ತನ್ನ ವಕ್‌ಫ್ ಕರ್ತವ್ಯಗಳನ್ನು ಈಡೇರಿಸುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ಅವರ ಪದವಿಯನ್ನು ಉನ್ನತಗೊಳಿಸಲಿ. ಅವರಿಗೆ ಮಗ್‌ಫಿರತ್ ಮತ್ತು ರಹಮತ್ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 26-01-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon